ಛೇರ್ಮನ್ :– ಸದನವು ನಾಳೇ ಬೆಳಿಗ್ಗೆ 11 : 00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 6 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಂಡು ನಾಳೆ ಅಂದರೆ ದಿನಾಂಕ 18 ನೇ ಜುಲೈ 2007 ರಂದು ಬೆಳಿಗ್ಗೆ 11 : 00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಅನುಬಂಧ – 1

347 (594) ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಬಸ್ ನಿಲ್ದಾಣಗಳ ಅಭಿವೃದ್ಧಿಗೆ ಹಾಕಿಕೊಂಡಿರುವ ಯೋಜನೆಗಳೇನು;

ಆ) 2006–07 ನೇ ಸಾಲಿನಲ್ಲಿ ಬಸ್ ನಿಲ್ದಾಣಗಳಿಗೆ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ; (ಜಿಲ್ಲಾವಾರು ವಿವರಗಳನ್ನು ನೀಡುವುದು)

ಇ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಬಸ್ ನಿಲ್ದಾಣಗಳು ಮಂಜೂರಾಗಿವೆ, ಇದಕ್ಕಾಗಿ ಬಿಡುಗಡೆ ಮಾಡಿದ ಹಣವೆಷ್ಟು? (ಮಂಜೂರಾಗಿದ್ದರೆ ತಾಲ್ಲೂಕಾವಾರು ವಿವರಗಳನ್ನು ತಿಳಿಸುವುದು)

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) KSRTC : ಮೊದಲ ಹಂತದಲ್ಲಿ 28 ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗಿದೆ.

BMTC : ಎಲ್ಲಾ ಬಸ್ ನಿಲ್ದಾಣಗಳ ಅಭಿವೃದ್ಧಿಗಾಗಿ ಸಿಮೆಂಟ್ ಕಾಂಕ್ರೀಟ್ ಡಾಂಬರೀಕರಣ ಶೌಚಾಲಯಗಳ ನವೀಕರಣ, ಇತ್ಯಾದಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಯಶವಂತಪುರ ಮತ್ತು ದೊಮ್ಮಲೂರು ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ಕಾರ್ಯಯೋಜನೆ ಸಿದ್ಧಪಡಿಸಲಾಗಿದೆ.

NWKRTC : ಬಸ್ ನಿಲ್ದಾಣಗಳಲ್ಲಿ ನಿರ್ಮಲ್ ಮಾದರಿಯ ಶೌಚಾಲಯಗಳನ್ನು ನಿರ್ಮಿಸಲು ಯೋಜಿಸಲಾಗಿದೆ. 114 ಬಸ್ ನಿಲ್ದಾಣಗಳ ಡಾಂಬರೀಕರಣ ಅಳವಡಿಸಲು ಯೋಜಿಸಲಾಗಿದೆ. 54 ಚಿಕ್ಕ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ಯೋಜಿಸಲಾಗಿದೆ.

NEKRTC : ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವುದು, ನವೀಕರಿಸುವುದು ಇತ್ಯಾದಿ ಅವಶ್ಯಕ ಸೇವೆಗಳನ್ನು ಒದಗಿಸಲು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

KSRTC :- (1) ಮಂಡ್ಯ : ರೂ. 146 ಲಕ್ಷಗಳು,
(2) ಮೈಸೂರು : ರೂ. 30 ಲಕ್ಷಗಳು

BMTC :- ರೂ. 1183.18 ಲಕ್ಷಗಳು.

NWKRTC : (1) ಧಾರವಾಡ : ರೂ. 116.97 ಲಕ್ಷಗಳು
(2) ಗದಗ್ : ರೂ. 86.95 ಲಕ್ಷಗಳು
(3) ಹಾವೇರಿ : ರೂ. 59.35 ಲಕ್ಷಗಳು
(4) ಉತ್ತರ ಕನ್ನಡ : ರೂ. 45.00 ಲಕ್ಷಗಳು
(5) ಬೆಳಗಾವಿ : ರೂ. 69.89 ಲಕ್ಷಗಳು
(6) ಬಿಜಾಪುರ : ರೂ. 447.34 ಲಕ್ಷಗಳು
(7) ಬಾಗಲಕೋಟೆ : ರೂ. 63.57 ಲಕ್ಷಗಳು

NEKRTC : (1) ಗುಲ್ಬರ್ಗಾ : ರೂ. 556.00 ಲಕ್ಷಗಳು
(2) ಬೀದರ್ : ರೂ. 240.00 ಲಕ್ಷಗಳು,
(3) ರಾಯಚೂರು : ರೂ. 150.00 ಲಕ್ಷಗಳು
(4) ಬಳ್ಳಾರಿ : ರೂ. 220.00 ಲಕ್ಷಗಳು
(5) ಕೊಪ್ಪಳ : ರೂ. 115.00 ಲಕ್ಷಗಳು.

ಇ) 6 ಬಸ್ ನಿಲ್ದಾಣಗಳು ಮಂಜೂರಾಗಿದೆ. ಇದಕ್ಕಾಗಿ ರೂ. 805.00 ಲಕ್ಷಗಳನ್ನು 2007–08 ನೇ ಸಾಲಿನಲ್ಲಿ ಪ್ರಾವಧಾನ ಮಾಡಲಾಗಿದೆ. ಹಣ ಬಿಡುಗಡೆ ಮಾಡಿರುವುದಿಲ್ಲ.

349 (596) ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) :– ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಿಂದ ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸಿದ ಯುವ ಕ್ರೀಡಾಪಟುಗಳು ಎಷ್ಟು; ಇಲ್ಲಿಯವರೆಗೆ ಅವರಿಗೆ ಸರ್ಕಾರದ ವತಿಯಿಂದ ವಿಶೇಷ ಅನುದಾನ ನೀಡಿದೆಯೇ; (ನೀಡಿದ್ದಲ್ಲಿ ವಿವರ ನೀಡುವುದು)